ಇಂದು ದಿನಾಂಕ:05.01.2024 ರಂದು ಪಿಡಬ್ಲ್ಯೂ:1 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>**ಪಾಟೀ ಸವಾಲು:**</u> ಪ್ರತಿವಾದಿ ರವರ ಪರ ಶ್ರೀ ಕೆ.ಎಸ್.ಎ. ವಕೀಲರಿಂದ:

1. ದಾವಾ ಸ್ವತ್ತುಗಳಲ್ಲಿ ಕಟ್ಟಡಗಳು ಇವೆ. ದಾವಾ ಷೆಡ್ಯೂಲ್ ಎ ಆಸ್ತಿ ಯಲ್ಲಿ ಒಂದು ಕಟ್ಟಡ ಇದೆ. ಕಟ್ಟಡದ ಬಗ್ಗೆ ವಾದಪತ್ರದಲ್ಲಿ ನಾವು ತೋರಿಸಿರಬಹುದು. ಕಟ್ಟಡದ ನಿರ್ಮಾಣ ಮಾಡಲು ನಾವು ಪರವಾನಿಗೆಯನ್ನು ತೆಗೆದುಕೊಂಡಿದ್ದೇವು. ಸದರಿ ಪರವಾನಿಗೆಯನ್ನು 2006-07 ನೇ ಸಾಲಿನಲ್ಲಿ ತೆಗೆದುಕೊಂಡಿರಬಹುದು. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲು ತೊಂದರೆ ಇಲ್ಲ. ದಾವಾ ಷೆಡ್ಯೂಲ್ ಎ ಸ್ವತ್ತು ಇ-ಖಾತಾ ಆಗಿಲ್ಲ. ಕಟ್ಟಡಕ್ಕೆ ಸಂಬಂದಿಸಿದ ಡಿಮ್ಯಾಂಡ್ ರಿಜಿಸ್ಟರ ಮತ್ತು ಅಸೆಸ್ ಮೆಂಟ್ ಎಕ್ಸ್ ಟ್ರಾಕ್ಟ್ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ಕಟ್ಟಡದ ಪರವಾನಿಗೆಯಲ್ಲಿ ಚಕ್ಕಬಂದಿ ಬರೆದ ಬಗ್ಗೆ ನನಗೆ ಗೊತ್ತಿಲ್ಲ. ಕ್ರಯಪತ್ರದಲ್ಲಿ ನಾವು ಎರಡು ಸ್ವತ್ತುಗಳನ್ನು ಖರೀದಿಸಿದ್ದೇವು. ಸದರಿ ಕ್ರಯಪತ್ರದಲ್ಲಿ 1994 ರಲ್ಲಿ ಆಗಿರುತ್ತದೆ. ಆ ಕ್ರಯಪತ್ರದಲ್ಲಿ ಚಕ್ಕುಬಂದಿಯನ್ನು ನಮೂದಿಸಲಾಗಿದೆ. ಕ್ರಯಪತ್ರದ ಪ್ರಕಾರ ಆಸ್ತಿಯ ಚಕ್ಕುಬಂದಿ ಪೂರ್ವಕ್ಕೆ ಕಳಸ ರಸ್ತೆ, ಪಶ್ಚಿಮ ಕೆ.ಎಸ್.ಆರ್.ಟಿ.ಸಿ. ಕಾಂಪೌಂಡ್, ಉತ್ತರಕ್ಕೆ ಅಚುತ್ ನಾಯಕ್ ಮತ್ತು ವಿಠಲ್ ರಾವ್ ಹೆಗಡೆರವರ ಆಸ್ತಿ ಮತ್ತು ಕಟ್ಟಡ ಮತ್ತು ದಕ್ಷಿಣಕ್ಕೆ ಇಬ್ರಾಹಿಂರವರ ಆಸ್ತಿ ಇರುತ್ತದೆ.

2. ನಿಪಿ-2 ಕ್ರಯಪತ್ರದ ಅಡಿ ತೆಗೆದುಕೊಂಡು ಇನ್ನೊಂದು ಆಸ್ತಿಯ ವಿಸ್ತೀರ್ಣ 3 ಎಕರೆ ಇರಬಹುದು. ಅದನ್ನು ಹೊರತುಪಡಿಸಿ 5 ಗುಂಟೆ ಕಣಮನೆಯನ್ನು ತೆಗೆದುಕೊಂಡಿದ್ದೇವೆ. ಕಡಮನೆಯ ಸರ್ವೆ ನಂ.129/ಪಿ. ಅದರ ಹೊಸ ಸರ್ವೆ ನಂ.214 ಇರುತ್ತದೆ. ಕ್ರಯಪತ್ರದಲ್ಲಿ ಹಳೆಯ ಸರ್ವೆ ನಂಬರ್ ಬರೆಯಲಾಗಿದೆ. ಆಗ ಆ ಆಸ್ತಿ ಪೋಡಾಗಿತ್ತು. ದಾವಾ ಆಸ್ತಿಯಿಂದ ಸರ್ವ ನಂ.9 ಒಂದು ಕಿಲೋಮೀಟರ್ ದೂರದಲ್ಲಿದೆ. ಸರ್ವೆ ನಂ.9 ಆಸ್ತಿ ಇರುವ ಜಾಗಕ್ಕೆ ಅತ್ತಿಗೆರೆ ಗ್ರಾಮ ಎಂದು ಕರೆಯುತ್ತಾರೆ. ದಾವಾ ಆಸ್ತಿ ಮತ್ತು ಸರ್ವೆ ನಂ.9 ರ ನಡುವೆ ಆಸ್ತಿ ಎಷ್ಟು ಜನರ ಆಸ್ತಿ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.181 ಮತ್ತು ದಾವಾ ಆಸ್ತಿ ನಡುವೆ 2 ಕಿಲೋಮೀಟರ್ ಅಂತರ ಇದೆ. ದಾವಾ ಆಸ್ತಿಯನ್ನು ನಿಪಿ-2 ರ ಕ್ರಯಪತ್ರದಂತೆ ಖರೀದಿಗೆ ತೆಗೆದುಕೊಂಡಿದ್ದೇವೆ ಎಂಬುದು ಸುಳ್ಳು ಎಂದರೆ ಸರಿಯಲ್ಲ.

3. ಸರ್ವೆ ನಂ.129 ಬಹಳ ದೊಡ್ಡದಾದ ವಿಸ್ತೀರ್ಣದಾದ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ಅದರ ವಿಸ್ತೀರ್ಣ ನನಗೆ ಗೊತ್ತಿಲ್ಲ. ದಾವಾ ಆಸ್ತಿ ಯಾವಾಗ ಪಕ್ಕಾ ಪೋಡಾಗಿರುತ್ತದೆ ಎಂದು ನನಗೆ

ಗೊತ್ತಿಲ್ಲ. ದಾವಾ ಆಸ್ತಿಯಿ ಒಂದು ಕಿಲೋಮೀಟರ್ ದೂರದಲ್ಲಿ ಮತ್ತು ಸರ್ವೆ ನಂ.9 ರ ಪಕ್ಕದಲ್ಲಿ 5 ಗುಂಟೆ ಆಸ್ತಿಯ್ನು ಸರ್ವೆ ನಂ.129 ರಲ್ಲಿ ಖರೀದಿಸಿದ್ದೇವೆ ಎಂಬುದು ಸುಳ್ಳು. ಪಕ್ಕಾ ಪೋಡು ಮಾಡಿಸುವಾಗ, ದಾವಾ ಆಸ್ತಿಗೆ ಪಕ್ಕಾ ಪೋಡು ಮಾಡಿಸಿದ್ದೇವೆ ಎಂದರೆ ಸುಳ್ಳು. ಖರೀದಿ ಮಾಡಿದ ಆಸ್ತಿ ಮತ್ತು ಪಕ್ಕಾ ಪೋಡಿ ಮಾಡಿದ ಆಸ್ತಿ ಬೇರೆ ಬೇರೆ ಎಂದರೆ ಸರಿಯಲ್ಲ. ನಿಪಿ-2 ಕ್ರಯಪತ್ರದಲ್ಲಿ ದಾವಾ ಷೆಡ್ಯೂಲ್ ಎ ಆಸ್ತಿಗೆ ನೀಡಿದ ಚಕ್ಕುಬಂದಿ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಚಕ್ಕುಬಂದಿಯನ್ನು ತಿದ್ದುಪಡಿ ಮಾಡಿಕೊಡುವಂತೆ ನಮಗೆ ಆಸ್ತಿ ಮಾರಾಟ ಮಾಡಿದ ಮಾರಾಟಗಾರರಿಂದ ಕೇಳಿಲ್ಲ. ಅವರ ವಿರುದ್ಧ ಚಕ್ಕುಬಂದಿ ಬದಲಾಯಿಸಿಕೊಡಬೇಕು ಎಂದು ಯಾವುದೇ ದಾವೆ ಹೂಡಿಲ್ಲ. ದಾವಾ ಷೆಡ್ಯೂಲ್ ಎ ಆಸ್ತಿ ಯ ಮಾಲೀಕರಲ್ಲದಿದ್ದರೂ ಸಹ ನಾವು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ಅ ಕಾರಣದಿಂದಲೇ ಆ ಆಸ್ತಿಗೆ ಸಂಬಂದಿಸಿದಂತೆ ಇ-ಸ್ವತ್ತನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುನ ಕಂದಾಯವನ್ನು ಪಂಚಾಯಿತಿಯಲ್ಲಿ ಕಟ್ಟುತ್ತಿದ್ದೇವೆ. ಅದರ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ಆ ರೀತಿ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

4. ಪ್ರತಿವಾದಿಗಳ ಆಸ್ತಿಯ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಅವರ ಆಸ್ತಿಗಳಲ್ಲಿ ಕಟ್ಟಡಗಳು ಇವೆ. ಪ್ರತಿವಾದಿಗಳ ಆಸ್ತಿಯ ಪೂರ್ವ ದಿಕ್ಕಿಗೆ ಕಳಸ-ಕೊಟ್ಟಿಗೆಹಾರ ರಸ್ತೆ ಇದೆ ಎಂದರೆ ಸರಿ. ಅದು ರಾಜ್ಯ ಹೆದ್ದಾರಿ ಎಂದರೆ ಸರಿ. ಅವರ ಆಸ್ತಿಯ ದಕ್ಷಿಣ ದಿಕ್ಕಿಗೆ ಕೆ.ಎಂ ರಸ್ತೆ ಬರುತ್ತದೆ ಎಂದರೆ ಸರಿ. ಅದು ರಾಷ್ಟ್ರೀಯ ಹೆದ್ದಾರಿ ಎಂದರೆ ಸರಿ. ಅವರ ಆಸ್ತಿಯ ಪಶ್ಚಿಮ ದಿಕ್ಕಿಗೆ ಕೆ.ಎಸ್.ಆರ್.ಟಿ.ಸಿ. ಬಸ್ ಸ್ಟಾಂಡ್ ಬರುತ್ತದೆ ಎಂದರೆ ಸರಿ. ದಾವಾ ಷೆಡ್ಯೂಲ್ ಎ ಆಸ್ತಿ ಯನ್ನು 2018 ರಲ್ಲಿ ಅಳತೆ ಮಾಡಿಸಿರುತ್ತೇನೆ. ಅದನ್ನು ಕ್ರಯಕ್ಕೆ ತೆಗೆದುಕೊಂಡಾಗ ಅಳತೆ ಮಾಡಿಸಿರಬಹುದು. ದಾವಾ ಆಸ್ತಿಯಲ್ಲಿ ನಮ್ಮ ಕಟ್ಟಡವನ್ನು ಕಳಸ-ಕೊಟ್ಟಿಗೆಹಾರ ರಸ್ತೆಯ ಅಂಚಿನಿಂದ 10 ಅಡಿ ಜಾಗ ಬಿಟ್ಟು ನಿರ್ಮಿಸಿದ್ದೇವು. ನಾವು ಒಂದೇ ಮನೆಯನ್ನು ನಿರ್ಮಿಸಿದ್ದೇವೆ. ಪಕ್ಕಾ ಪೋಡು ಮಾಡುವಾಗ ರಸ್ತೆಯ ಮಾರ್ಜಿನನ್ನು ಕಳೆದು ಪಕ್ಕಾ ಪೋಡು ಮಾಡಬೇಕು ಎಂದರೆ ನನಗೆ ಗೊತ್ತಿಲ್ಲ.

5. ಪ್ರತಿವಾದಿಗಳು ಒತ್ತುವರಿ ಮಾಡಿರುವ ವಿಚಾರವನ್ನು ನಮಗೆ 2018 ರಲ್ಲಿ ಗಮನಕ್ಕೆ ಬಂದಿರುತ್ತದೆ. ಪ್ರತಿವಾದಿಗಳು ನಮ್ಮ ಜಾಗದಲ್ಲಿ ಕಟ್ಟಲು ಪ್ರಾರಂಬಿಸಿದಾಗ ಆ ವಿಚಾರ ಗೊತ್ತಾಗಿರುತ್ತದೆ. ದಾವಾ ಷೆಡ್ಯೂಲ್ ಎ ಆಸ್ತಿಯ ಅಡಿ ಲೆಕ್ಕದ ವಿಸ್ತೀರ್ಣ ನನಗೆ ಗೊತ್ತಿಲ್ಲ. ಆ ಆಸ್ತಿಯ ಮೂರು ಮೂಲೆಗಳು ಸಮನಾಂತರವಾಗಿದ್ದು, ಆದರೆ ಒಂದು ಮೂಲೆ ಅಂದರೆ ಕೆ.ಎಸ್.ಆರ್.ಟಿ.ಸಿ. ಕಾಂಪೌಂಡ್ ಮತ್ತು ಇಬ್ರಾಹಿಂರವರ ಆಸ್ತಿಯ ಕಡೆ ಮಾತ್ರ ಹೆಚಿನ್ನ ವಿಸ್ತೀರ್ಣ ಹೊಂದಿದೆ. ಅಳತೆ

ಮಾಡುವ ಪೂರ್ವದಲ್ಲಿ ಪೊಲೀಸ್ ದೂರು ನೀಡಲು ಹೋಗಿದ್ದೇವು, ಆದರೆ ಅವರು ಸ್ವೀಕರಿಸಿಲ್ಲ. ಸರ್ವೆ ನೋಟಿಸನ್ನು ಪ್ರತಿವಾದಿಗಳಿಗೆ ಜಾರಿ ಮಾಡಿದ್ದರು. ಆ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಮತ್ತು ಸರ್ವೇಯರುಗಳು ಶಾಮೀಲಾಗಿ ಅಳತೆ ಪೂರ್ವದಲ್ಲಿ ಬಾಜುದಾರರಿಗೆ ಯಾವುದೇ ನೋಟಿಸು ನೀಡಿಲ್ಲ ಎಂದರೆ ಸುಳ್ಳು. ಆದ್ದರಿಂದಲೇ ಆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸುಳ್ಳು. ಸರ್ವೇಮಾಡಿದ ಕಾಲಕ್ಕೆ ದಾವಾ ಆಸ್ತಿಯ ಉತ್ತರ ಮತ್ತು ದಕ್ಷಿಣ ದಿಕ್ಕಿಗೆ ಇರುವ ಆಸ್ತಿಗಳನ್ನು ಅಳತೆ ಮಾಡಿದ್ದಾರೆ. ಸಾಕ್ಷಿಯು ಸ್ವತಃ ಮುಂದುವರೆದು, ನಮ್ಮ ಆಸ್ತಿಯ ಸುತ್ತಲೂ ಅಳತೆ ಮಾಡಿದ್ದಾರೆ ಎಂದು ನುಡಿಯುತ್ತಾರೆ. ನಕ್ಷೆಯಲ್ಲಿ ಬೇರೆಯವರ ಆಸ್ತಿ ಅಳತೆ ತೋರಿಸಿಲ್ಲ. ಹದ್ದುಬಸ್ತು ನಕ್ಷೆಯನ್ನು ನಾನು ಮತ್ತು ಸರ್ವೇಯರುಗಳು ಶಾಮೀಲಾಗಿ ಅಳತೆ ಮಾಡದೇ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

6. ಅಳತೆ ಮಾಡಿದಾಗ ಇಬ್ರಾಹಿಂರವರ ಆಸ್ತಿ ಎಷ್ಟು ಇತ್ತು ಎಂದರೆ ಅದು ನನಗೆ ಗೊತ್ತಿಲ್ಲ, ಆದರೆ ಬೇರೆಯವರ ಆಸ್ತಿ 5 ಗುಂಟೆ ಇತ್ತು ಎಂದು ನುಡಿಯುತ್ತಾರೆ. ಇಬ್ರಾಹಿಂರವರ ಆಸ್ತಿಗೆ 2 ಕಡೆ ರಸ್ತೆ ಮತ್ತು ರಸ್ತೆ ಮಾರ್ಜಿನ್ ಬರುತ್ತದೆ ಎಂದರೆ ಸರಿ. ದಾವಾ ಷೆಡ್ಯೂಲ್ ಎ ಆಸ್ತಿಯ ಉತ್ತರಕ್ಕೆ ಅಚ್ಯುತ್ ನಾಯಕ್ ಮತ್ತು ವಿಠಲರಾವ್ ಹೆಗಡೆ ಇದ್ದರು, ಈಗ ಯಾರು ಇದ್ದಾರೆ ಎಂದು ನನಗೆ ಗೊತ್ತಿಲ್ಲ. ಆ ಆಸ್ತಿಯಲ್ಲಿ ಮೊದಲು ಬಾರ್ ಅಂಡ್ ರೆಸ್ಟೋರೆಂಟ ಇದ್ದು, ಈಗ ಕ್ಯಾಂಟೀನ್ ಇದೆ. ಸದರಿ ಕ್ಯಾಂಟೀನ್ ಕಟ್ಟಡದಲ್ಲಿದೆ. ಕ್ಯಾಂಟೀನ್ ಮತ್ತು ದಾವಾ ಷೆಡ್ಯೂಲ್ ಎ ಆಸ್ತಿಯ ನಡುವ ಕಾಂಪೌಂಡ್ ಇದೆ. ನಮ್ಮ ದಾವಾ ಷೆಡ್ಯೂಲ್ ಎ ಆಸ್ತಿಯ ಕಟ್ಟಡದಿಂದ ಕಾಂಪೌಂಡ್ 2-3 ಅಡಿ ಇದೆ. ಕ್ಯಾಂಟೀನ ಕಟ್ಟಡದಿಂದ ಕಾಂಪೌಂಡಿಗೆ ಎಷ್ಟು ದೂರ ಇದೆ ಎಂದು ಗೊತ್ತಿಲ್ಲ. ದಾವಾ ಷೆಡ್ಯೂಲ್ ಎ ಆಸ್ತಿಯಲ್ಲಿ ಪ್ರತಿವಾದಿಗಳು ಒತ್ತುವರಿ ಮಾಡಿದ್ದರೆ ಎಂಬುದು ಸುಳ್ಳು ಎಂದರೆ ಸರಿಯಲ್ಲ. ಹದ್ದುಬಸ್ತು ನಕ್ಷೆಯನ್ನು ಸುಳ್ಳು ಮಾಡಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಾವು ದಾವಾ ಷೆಡ್ಯೂಲ್ ಎ ಆಸ್ತಿಯ ಮಾಲೀಕರಲ್ಲಿ ಎಂದರೆ ಸರಿಯಲ್ಲ. ಆ ಕಾರಣದಿಂದ ದಾವಾ ಷೆಡ್ಯೂಲ್ ಬಿ ಆಸ್ತಿಯ ಸ್ವಾಧೀನ ಕೇಳುವ ಹಕ್ಕು ಇಲ್ಲ ಎಂದರೆ ಸರಿಯಲ್ಲ.

7.ದಾವಾ ಷೆಡ್ಯೂಲ್ ಎ ಆಸ್ತಿಯಲ್ಲಿ ಉತ್ತರದಲ್ಲಿ ಪಶ್ಚಿಮಕ್ಕೆ 10 ಅಡಿ, ದಕ್ಷಿಣದಲ್ಲಿ ಪಶ್ಚಿಮಕ್ಕೆ 25 ಅಡಿ, ಒಟ್ಟು 100 ಅಡಿ ಉದ್ದದ ಜಾಗ ಅತಿಕ್ರಮಣವಾಗಿರುತ್ತದೆ. ಆ ಜಾಗದಲ್ಲಿ ಕಟ್ಟಡ ನಿರ್ಮಿಸಿದ್ದಾರೆ. ಅತಿಕ್ರಮಣ ಪ್ರವೇಶ ಮಾಡಿ ಕಟ್ಟಡ ನಿರ್ಮಿಸುತ್ತಿದ್ದಾರೆ ಎಂದು ಗ್ರಾಮ ಪಂಚಾಯಿತಿಯವರಿಗೆ ದೂರು ನೀಡಿಲ್ಲ. ಆ ರೀತಿ ದೂರುನೀಡಲು ತೊಂದರೆ ಇರಲಿಲ್ಲ ಎಂದರೆ ನಾವು ಪೊಲೀಸರಿಗೆ ದೂರು ನೀಡಿದ್ದೇವು ಎಂದು ನುಡಿಯುತ್ತಾರೆ. ಪ್ರತಿವಾದಿಗಳು ಕಟ್ಟಡ ನಿರ್ಮಾಣ

ಮಾಡಲು ಪರವಾನಿಗೆ ತೆಗೆದುಕೊಂಡಿರುವ ಬಗ್ಗೆ ನಾನು ನೋಡಿಲ್ಲ. ಪಂಚಾಯಿತಿಗೆ ಹೋಗಿ ಪರವಾನಿಗೆ ಬಗ್ಗೆ ವಿಚಾರಿಸಿರುತ್ತೇವೆ. ಆದರೆ ಯಾವುದೇ ಆಕ್ಷೇಪಣೆಗಳನ್ನು ಸಲ್ಲಿಸಿಲ್ಲ. ದಾವಾ ಷೆಡ್ಯೂಲ್ ಬಿ ಆಸ್ತಿ ಯಲ್ಲಿ ಕಟ್ಟಡ ಇರುವ ಬಗ್ಗೆ ನಮೂದಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಕಟ್ಟಡವನ್ನು ಕೆಡವಿಸಬೇಕೆಂದು ಪರಿಹಾರವನ್ನು ಕೇಳಿದ್ದೇವೆ.

ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯವಕಾಶವನ್ನು ಕೇಳಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಸಹಿ/-

ಓ ಹೇ ಕೇ ಸರಿ ಇದೆ.

ಪಿ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಮೂಡಿಗೆರೆ